## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 113 |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ |
| ಉತ್ತರಿಸುವ ದಿನಾಂಕ | : | 17-08-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ಹಾಗೂ ಇಲಾಖಾವಾರು ವಿವರ ಒದಗಿಸುವುದು) | ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಒಟ್ಟು 461 ವಿದ್ಯಾರ್ಥಿ ನಿಲಯಗಳನ್ನು ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ಒಟ್ಟು 100 ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ.<br>ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಆ) | ಮೇಲ್ಕಂಡ ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸರ್ಕಾರ ವಾರ್ಷಿಕ/ ಮಾಸಿಕವಾಗಿ ಒದಗಿಸುವ ಅನುದಾನ ಎಷ್ಟು; ಆಹಾರ, ಹಾಲು, ಮೊಟ್ಟೆ, ವಸತಿ, ಸಮವಸ್ತ್ರ, ಶೌಚಾಲಯ ನಿರ್ವಹಣೆ, ಸ್ವಚ್ಛತೆ, ವಿದ್ಯುತ್, ಕುಡಿಯುವ ನೀರು, ವೈದ್ಯಕೀಯ ಸ್ಟೇಷನರಿ, ಹಾಸಿಗೆ, ಇತರೆ ಸೌಲಭ್ಯಗಳು ಸೇರಿದಂತೆ ಕಾಂಪೊನೆಂಟ್‌ವಾರು ಅನುದಾನದ ವಿವರ ಒದಗಿಸುವುದು; | ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ದಾಖಲಾಗುವ ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಸೌಲಭ್ಯದ ವಿವರವನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಇ) | ಮೇಲ್ಕಂಡ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿರುವ ಆಹಾರ, ಪೌಷ್ಟಿಕ ಆಹಾರ, ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಮರ್ಪಕವಾಗಿ ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸ್ವೀಕರಿಸಲಾದ ದೂರುಗಳ ಸಂಖ್ಯೆ ಪರಿಶೀಲನೆ ನಡೆಸಿದ ವಿವರ ಹಾಗೂ ಕೈಗೊಂಡ ಕ್ರಮಗಳ ವಿವರ ನೀಡುವುದು; | ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ಪೌಷ್ಟಿಕ ಆಹಾರ ಮೂಲಭೂತ ಸೌಕರ್ಯಗಳು ಹಾಗೂ ಇತರೆ ಸೌಲಭ್ಯಗಳ ಕುರಿತು 11 ದೂರುಗಳು ಸ್ವೀಕೃತವಾಗಿದ್ದು, ಸದರಿ ದೂರುಗಳನ್ನು ಆಯಾ ಜಿಲ್ಲೆಗಳ ಜಂಟಿ / ಉಪ ನಿರ್ದೇಶಕರಿಗೆ ಪರಿಶೀಲಿಸಿ ವರದಿ ನೀಡಲು ಸೂಚಿಸಲಾಗಿರುತ್ತದೆ. ಅದರಂತೆ ಜಂಟಿ / ಉಪ ನಿರ್ದೇಶಕರುಗಳು ದೂರುಗಳ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಿರುವುದಾಗಿ ವರದಿ ನೀಡಿರುತ್ತಾರೆ. |

| | | |
|---|---|---|
| | | ವಿದ್ಯಾರ್ಥಿನಿಲಯಗಳಲ್ಲಿ ಸರಿಯಾದ ಸಮಯಕ್ಕೆ ಊಟೋಪಚಾರ ನೀಡದೇ ಇರುವ ಬಗ್ಗೆ, ಉಪ ನಿರ್ದೇಶಕರು, ಯಾದಗಿರಿ ಜಿಲ್ಲೆ ಇವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಅದರಂತೆ ಕಾರಣ ಕೇಳಿ ನೋಟಿಸ್‌ಗೆ ನೀಡಿದ ವಿವರಣೆಗಳ ಹಿನ್ನೆಲೆಯಲ್ಲಿ ಮುಂದೆ ಈ ರೀತಿ ಸಮಸ್ಯೆ ಮರುಕಳಿಸದಂತೆ ಕ್ರಮವಹಿಸಲು ಎಚ್ಚರಿಕೆ ನೀಡಲಾಗಿರುತ್ತದೆ ಹಾಗೂ ವಿದ್ಯಾರ್ಥಿನಿಲಯದ ಅಸಮರ್ಪಕ ನಿರ್ವಹಣೆ ಕರ್ತವ್ಯ ಲೋಪವೆಸಗಿರುವ ಶ್ರೀ.ಪಂಪನಗೌಡ ವಾರ್ಡನ್, ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ನವಲಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ರ ನಿಯಮ 12(1)ಎ ರನ್ವಯ ಶಿಸ್ತು ಕ್ರಮಕ್ಕೆಗೊಳ್ಳಲಾಗಿದೆ.<br><br>ಮುಂದುವರೆದು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಪೌಷ್ಠಿಕ ಆಹಾರ, ಮೂಲಭೂತ ಸೌಕರ್ಯಗಳು ಹಾಗೂ ಇತರೆ ಸೌಲಭ್ಯಗಳ ಕುರಿತು 3 ದೂರುಗಳು ಸ್ವೀಕೃತವಾಗಿದ್ದು, ಸದರಿ ದೂರುಗಳ ಪೈಕಿ ರಾಯಚೂರು ಮತ್ತು ಕಲಬುರಗಿ ಜಿಲ್ಲೆಗಳಲ್ಲಿನ ಎರಡು ದೂರಗಳನ್ನು ಪರಿಶೀಲಿಸಿದಾಗ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಸದರಿ ವಿದ್ಯಾರ್ಥಿನಿಲಯಗಳ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ಉಳಿದ ಒಂದು ದೂರಿಗೆ ಸಂಬಂಧಿಸಿದಂತೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. |
| ಈ) | 2025-26 ಹಾಗೂ 2026-27ನೇ ಸಾಲಿನಲ್ಲಿ ಮೇಲ್ಕಂಡ ವಿದ್ಯಾರ್ಥಿ ನಿಲಯಗಳ ಆಹಾರ ಮತ್ತು ಇತರೆ ಸೌಲಭ್ಯಗಳಿಗಾಗಿ ಜಿಲ್ಲಾವಾರು ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; ಎಷ್ಟು ಅನುದಾನ ಖರ್ಚು ಮಾಡಲಾಗಿದೆ; (ಇಲಾಖಾವಾರು ಹಾಗೂ ಜಿಲ್ಲಾವಾರು ವಿವರ ಒದಗಿಸುವುದು) | 2025-26 ಹಾಗೂ 2026-27ನೇ ಸಾಲಿನಲ್ಲಿ ಮೇಲ್ಕಂಡ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗಾಗಿ ಒದಗಿಸಲಾಗಿರುವ ಜಿಲ್ಲಾವಾರು ಅನುದಾನದ ವಿವರವನ್ನು **ಅನುಬಂಧ-3** ಮತ್ತು **ಅನುಬಂಧ-4** ರಲ್ಲಿ ನೀಡಿದೆ. |

| | | |
|---|---|---|
| ಉ) | ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿರುವ ಎಲ್ಲಾ ಸೌಲಭ್ಯಗಳನ್ನು ಗುಣಮಟ್ಟದೊಂದಿಗೆ ನಿಯಮಿತವಾಗಿ ಹಾಗೂ ಸಮರ್ಪಕವಾಗಿ ಒದಗಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಬಾಕಿ ಉಳಿದಿರುವ ಕೊರತೆಗಳನ್ನು ನಿವಾರಿಸಲು ಸರ್ಕಾರ ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು? (ವಿವರ ಒದಗಿಸುವುದು) | ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಸಮರ್ಪಕವಾಗಿ ನಿರ್ವಹಣೆ ಮಾಡಲು ಕೈಗೊಂಡಿರುವ ಕ್ರಮದ ವಿವರವನ್ನು **ಅನುಬಂಧ-5** ರಲ್ಲಿ ನೀಡಿದೆ. |

**ಸಕಇ 747 ಪಕವಿ 2026**

**(ಕೆ.ಹೆಚ್.ಮುನಿಯಪ್ಪ)**
**ಸಮಾಜ ಕಲ್ಯಾಣ ಸಚಿವರು**

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 113 ಕ್ಕೆ ಅನುಬಂಧ-1

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿರುವ ವಿದ್ಯಾರ್ಥಿನಿಲಯಗಳ ಜಿಲ್ಲಾವಾರು ವಿವರ.

### 1. ಸಮಾಜ ಕಲ್ಯಾಣ ಇಲಾಖೆ:-

| ಕ್ರ. ಸಂ | ಜಿಲ್ಲೆಯ ಹೆಸರು | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಒಟ್ಟು ನಿಲಯಗಳ ಸಂಖ್ಯೆ |
|---|---|---|---|---|
| 1 | ಬಳ್ಳಾರಿ | 22 | 18 | 40 |
| 2 | ಬೀದರ್ | 42 | 19 | 61 |
| 3 | ಕಲಬುರಗಿ | 72 | 38 | 110 |
| 4 | ಕೊಪ್ಪಳ | 33 | 24 | 57 |
| 5 | ರಾಯಚೂರು | 46 | 31 | 77 |
| 6 | ಯಾದಗಿರಿ | 38 | 15 | 53 |
| 7 | ವಿಜಯನಗರ | 39 | 24 | 63 |
| | **ಒಟ್ಟು:** | **292** | **169** | **461** |

### 2. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ:-

| ಕ್ರ.ಸಂ | ಜಿಲ್ಲೆ | ಮೆಟ್ರಿಕ್ ಪೂರ್ವ | ಮೆಟ್ರಿಕ್ ನಂತರ | ಒಟ್ಟು |
|---|---|---|---|---|
| 1 | ಕಲಬುರಗಿ | 2 | 3 | 5 |
| 2 | ಯಾದಗಿರಿ | 3 | 3 | 6 |
| 3 | ಬಳ್ಳಾರಿ | 4 | 14 | 18 |
| 4 | ವಿಜಯನಗರ | 9 | 12 | 21 |
| 5 | ಬೀದರ್ | 4 | 7 | 11 |
| 6 | ರಾಯಚೂರು | 10 | 14 | 24 |
| 7 | ಕೊಪ್ಪಳ | 7 | 8 | 15 |
| **ಒಟ್ಟು** | | **39** | **61** | **100** |

ಸರ್ಕಾರದ ಅಧೀನ ಕಾರ್ಯದರ್ಶಿ-1
ಸಮಾಜ ಕಲ್ಯಾಣ ಇಲಾಖೆ

# ಅನುಬಂಧ-2

**ಇಲಾಖೆ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿಲಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರ.**

| ಕ್ರ. ಸಂ | ಮೆಟ್ರಿಕ್ ಪೂರ್ವ ವಿ ನಿಲಯಗಳು | ಮೆಟ್ರಿಕ್ ನಂತರ ವಿ ಲಯಗಳು |
|---|---|---|
| 01 | ಮಾಹೆಯಾನ ರೂ.1750.00/-ರ ವೆಚ್ಚದಲ್ಲಿ ಭೋಜನ. | ಮಾಹೆಯಾನ ರೂ.1850.00/-ರ ವೆಚ್ಚದಲ್ಲಿ ಭೋಜನ. |
| 02 | ಮಾಹೆಯಾನ ರೂ.171.00ರ ವೆಚ್ಚದಲ್ಲಿ ಬಾಲಕರಿಗೆ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಕೇಕ್, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಮತ್ತು ಟೂತ್ ಬ್ರಷ್. ಮಾಹೆಯಾನ ರೂ.230.00ರ ವೆಚ್ಚದಲ್ಲಿ ಬಾಲಕಿಯರಿಗೆ ಈ ಮೇಲಿನ ಸಾಮಾಗ್ರಿಗಳ ಜೊತೆಗೆ ಹೆಚ್ಚುವರಿಯಾಗಿ ಟಾಲ್ಕಂ ಪೌಡರ್‌ನ್ನು ನೀಡಲಾಗುವುದು. | ಮಾಹೆಯಾನ ರೂ.171.00ರ ವೆಚ್ಚದಲ್ಲಿ ಬಾಲಕರಿಗೆ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಕೇಕ್, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಮತ್ತು ಟೂತ್ ಬ್ರಷ್ ಮಾಹೆಯಾನ ರೂ.230.00ರ ವೆಚ್ಚದಲ್ಲಿ ಬಾಲಕಿಯರಿಗೆ ಈ ಮೇಲಿನ ಸಾಮಾಗ್ರಿಗಳ ಜೊತೆಗೆ ಹೆಚ್ಚುವರಿಯಾಗಿ ಟಾಲ್ಕಂ ಪೌಡರ್‌ನ್ನು ನೀಡಲಾಗುವುದು. |
| 03 | ಮೂರು ವರ್ಷಕ್ಕೊಮ್ಮೆ ರೂ.800.00 ವೆಚ್ಚದಲ್ಲಿ ಹಾಸಿಗೆ ಹೊದಿಕೆ. | ಮೂರು ವರ್ಷಕ್ಕೊಮ್ಮೆ ರೂ.1000.00 ವೆಚ್ಚದಲ್ಲಿ ಹಾಸಿಗೆ,ಹೊದಿಕೆ. |
| 04 | ಪ್ರತಿ ನಿಲಯಕ್ಕೆ ವಾರ್ಷಿಕ ರೂ.3000.00 ವೆಚ್ಚದಲ್ಲಿ ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ. | ಪ್ರತಿ ನಿಲಯಕ್ಕೆ ವಾರ್ಷಿಕ ರೂ.3500.00 ವೆಚ್ಚದಲ್ಲಿ ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ. |
| 05 | ಪ್ರತಿ ಬಾಲಕಿ ವಿದ್ಯಾರ್ಥಿನಿಯರಿಗೆ ರೂ.857.00ರ ವೆಚ್ಚದಲ್ಲಿ ಕರಾಟೆ ಸಮವಸ್ತ್ರ | ಪ್ರತಿ ಬಾಲಕಿ ವಿದ್ಯಾರ್ಥಿನಿಯರಿಗೆ ರೂ.857.00ರ ವೆಚ್ಚದಲ್ಲಿ ಕರಾಟೆ ಸಮವಸ್ತ್ರ |
| 06 | ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ ರೂ.20,000.00ಗಳ ಮಿತಿಯೊಳಗೆ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುವುದು. | ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ ರೂ.20,000.00ಗಳ ಮಿತಿಯೊಳಗೆ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುವುದು |
| 07 | ಪ್ರತಿ ನಿಲಯದ ಬಾಲಕಿಯರ ವಿದ್ಯಾರ್ಥಿಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ.100/-ಗಳ ಮಿತಿಯೊಳಗೆ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ಒದಗಿಸುವುದು. | ಪ್ರತಿ ನಿಲಯದ ಬಾಲಕಿಯರ ವಿದ್ಯಾರ್ಥಿಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ.100/-ಗಳ ಮಿತಿಯೊಳಗೆ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ಒದಗಿಸುವುದು. |
| 08 | ವಾರ್ಷಿಕ ರೂ.752.00 ರಿಂದ 1102.00ರ ವೆಚ್ಚದಲ್ಲಿ 02 ಜೊತೆ ಸಮವಸ್ತ್ರಗಳು | - |
| 09 | ವಾರ್ಷಿಕ ರೂ.363.39ರ ವೆಚ್ಚದಲ್ಲಿ 01 ಜೊತೆ ಶೂ ಮತ್ತು ಸಾಕ್ಸ್. | - |
| 10 | ವಾರ್ಷಿಕ ರೂ.400.00ರ ವೆಚ್ಚದಲ್ಲಿ ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿ. | |

---2

| | | |
|---|---|---|
| 11 | ವಾರ್ಷಿಕ ರೂ.150.00 ರ ವೆಚ್ಚದಲ್ಲಿ ಬಾಲಕರಿಗೆ ಕ್ಷೌರದ ವೆಚ್ಚ | - |
| 09 | 50 ವಿದ್ಯಾರ್ಥಿಗಳ ಸಂಖ್ಯೆಯ ಪ್ರತಿ ನಿಲಯಕ್ಕೆ ವಾರ್ಷಿಕ ರೂ.5000.00 ರ ವೆಚ್ಚದಲ್ಲಿ ಹಾಗೂ 100 ವಿದ್ಯಾರ್ಥಿಗಳ ಸಂಖ್ಯೆ ಮೀರಿದ ಪ್ರತಿ ನಿಲಯಕ್ಕೆ ವಾರ್ಷಿಕ ರೂ.8000.00ಗಳ ವೆಚ್ಚದಲ್ಲಿ ವೈದ್ಯಕೀಯ ಸೌಲಭ್ಯ. | - |
| 10 | ವರ್ಷದಲ್ಲಿ 6 ತಿಂಗಳು ವಿಜ್ಞಾನ, ಗಣಿತ, ಇಂಗ್ಲೀಷ್ ಮತ್ತು ಇತರೆ ಸಾಮಾನ್ಯ ವಿಷಯಗಳಲ್ಲಿ 03 ಅರೆ ಕಾಲಿಕ ಬೋಧಕರಿಂದ ವಿಶೇಷ ಬೋಧನೆ.(ವಾರ್ಷಿಕ ವೆಚ್ಚ ರೂ.18,000/-) | - |

# ಅನುಬಂಧ-2

## (S T) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳು

| ಕ್ರ. ಸಂ. | ಸೌಲಭ್ಯಗಳ ವಿವರ | ಪ್ರತಿ ನಿಲಯ/ವಿದ್ಯಾರ್ಥಿಗೆ ಭರಿಸುತ್ತಿರುವ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಹಾಸಿಗೆ ಮತ್ತು ಹೊದಿಕೆ (ಪ್ರತಿ ವಿದ್ಯಾರ್ಥಿಗೆ ಮೂರು ವರ್ಷಕ್ಕೊಮ್ಮೆ) | 800.00 |
| 2 | ಲೇಖನ ಸಾಮಗ್ರಿಗಳು (ಪ್ರತಿ ವಿದ್ಯಾರ್ಥಿಗೆ ವಾರ್ಷಿಕ) | 400.00 |
| 3 | ವೈದ್ಯಕೀಯ ವೆಚ್ಚ (ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ) | |
| | ಅ) 100 ಸಂಖ್ಯಾಬಲದ ವರೆಗಿನ ವಿದ್ಯಾರ್ಥಿನಿಲಯಗಳು | 5000.00 |
| | ಆ) 100 ಸಂಖ್ಯಾಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | 8000.00 |
| 4 | ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ (ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ವೆಚ್ಚ) | 3000.00 |
| 5 | ಕ್ರೀಡಾ ಸಾಮಗ್ರಿ (ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ | 20000.00 |
| 6 | ಶೂ ಮತ್ತು ಸಾಕ್ಸ್ (ಪ್ರತಿ ವಿದ್ಯಾರ್ಥಿಗೆ ವಾರ್ಷಿಕ) | 300.00 |
| 7 | ಕ್ಷೌರ ವೆಚ್ಚ (ಬಾಲಕರಿಗೆ) (ಪ್ರತಿ ವಿದ್ಯಾರ್ಥಿಗೆ ವಾರ್ಷಿಕ) | 150.00 |
| 8 | ಶುಚಿ ಸಂಭ್ರಮ ಕಿಟ್ ಭತ್ಯೆ (ಪ್ರತಿ ಮಾಹೆಯಾನ) | |
| | ಅ) ಬಾಲಕಿಯರು | 193.00 |
| | ಆ) ಬಾಲಕರು | 146.00 |
| 9 | ಆಹಾರ ವೆಚ್ಚ (ಪ್ರತಿ ಮಾಹೆಯಾನ) | 1750.00 |
| 10 | ಶೌಚಾಲಯ/ನಿಲಯ ಸ್ವಚ್ಛತೆಯ ಸಾಮಗ್ರಿಗಳ ಖರೀದಿ (ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ) | |
| | ಅ) 100 ಸಂಖ್ಯಾಬಲದ ವರೆಗಿನ ವಿದ್ಯಾರ್ಥಿನಿಲಯಗಳು | 750.00 |
| | ಆ) 100 ಸಂಖ್ಯಾಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | 1000.00 |
| 11 | ಶೌಚಾಲಯ/ನಿಲಯ ಸ್ವಚ್ಛತೆ (ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ) | |
| | ಅ) 100 ಸಂಖ್ಯಾಬಲದ ವರೆಗಿನ ವಿದ್ಯಾರ್ಥಿನಿಲಯಗಳು | 2000.00 |
| | ಆ) 100 ಸಂಖ್ಯಾಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | 2500.00 |

| | | | |
|---|---|---|---|
| 12 | ಅರೆಕಾಲಿಕ ಬೋಧಕರಿಂದ ವಿಶೇಷ ಬೋಧನ (3 ಅರೆಕಾಲಿಕ ಬೋಧಕರು) (ಪ್ರತಿ ಮಾಹೆ ರೂ.1000/-ಗಳಂತೆ 6 ತಿಂಗಳ ಅವಧಿಗೆ) | 18000.00 | |
| 13 | ಸಮವಸ್ತ್ರ | **Class** | **Rate for 1 set** |
| | | 5-7 | 394.00 |
| | | 8 | 530.00 |
| | | 9-10 | 530.00 |
| | | 5-7 | 562.00 |
| | | 8 | 646.00 |
| | | 9-10 | 646.00 |

ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

## ಅನುಬಂಧ-2

## ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳು

| ಕ್ರ. ಸಂ. | ಸೌಲಭ್ಯಗಳ ವಿವರ | ಪ್ರತಿ ನಿಲಯ/ವಿದ್ಯಾರ್ಥಿಗೆ ಭರಿಸುತ್ತಿರುವ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಹಾಸಿಗೆ ಮತ್ತು ಹೊದಿಕೆ (ಪ್ರತಿ ವಿದ್ಯಾರ್ಥಿಗೆ ಮೂರು ವರ್ಷಕ್ಕೊಮ್ಮೆ) | 1000.00 |
| 2 | ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ (ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ವೆಚ್ಚ) | 3500.00 |
| 3 | ಕ್ರೀಡಾ ಸಾಮಗ್ರಿ (ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ | 20000.00 |
| 4 | ಶುಚಿ ಸಂಭ್ರಮ ಕಿಟ್ ಭತ್ಯೆ (ಪ್ರತಿ ಮಾಹೆಯಾನ) | |
| | ಅ) ಬಾಲಕಿಯರು | 161.00 |
| | ಆ) ಬಾಲಕರು | 134.00 |
| 5 | ಆಹಾರ ವೆಚ್ಚ (ಪ್ರತಿ ಮಾಹೆಯಾನ) | 1850.00 |
| 6 | ಶೌಚಾಲಯ/ನಿಲಯ ಸ್ವಚ್ಛತೆಯ ಸಾಮಗ್ರಿಗಳ ಖರೀದಿ (ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ) | |
| | ಅ) 100 ಸಂಖ್ಯಾಬಲದ ವರೆಗಿನ ವಿದ್ಯಾರ್ಥಿನಿಲಯಗಳು | 750.00 |
| | ಆ) 100 ಸಂಖ್ಯಾಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | 1000.00 |
| 7 | ಶೌಚಾಲಯ/ನಿಲಯ ಸ್ವಚ್ಛತೆ (ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ) | |
| | ಅ) 100 ಸಂಖ್ಯಾಬಲದ ವರೆಗಿನ ವಿದ್ಯಾರ್ಥಿನಿಲಯಗಳು | 2000.00 |
| | ಆ) 100 ಸಂಖ್ಯಾಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | 2500.00 |

ನಿರ್ದೇಶಕರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

# ಅನುಬಂಧ-3

## 2025-26ನೇ ಸಾಲಿಗೆ ಲೆಕ್ಕಶೀರ್ಷಿಕೆವಾರು ಬಿಡುಗಡೆಯಾದ ಅನುದಾನದ ವಿವರ

ರೂ.ಲಕ್ಷಗಳಲ್ಲಿ

| ಕ್ರ ಸಂ | ಜಿಲ್ಲೆ ಹೆಸರು | ಪರಿಶಿಷ್ಟ ಜಾತಿ/ಮೆಟ್ರಿಕ್ ನಂತರದ ಸರ್ಕಾರಿ ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-101-0-29 | | ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ನಿವಾಸಿ ಶಾಲೆಗಳು 2225-00-101-0-32 | | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-101-0-61 | |
|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| 1 | ಕಲಬುರ್ಗಿ | 2540.43 | 2503.67 | 524.92 | 388.22 | 3269.16 | 2937.97 |
| 2 | ಬಳ್ಳಾರಿ | 1244.09 | 1222.49 | 70.74 | 70.45 | 1305.44 | 1261.75 |
| 3 | ಬೀದರ್ | 984.48 | 979.03 | 259.39 | 224.82 | 1823.77 | 1712.57 |
| 4 | ರಾಯಚೂರು | 2476.40 | 2407.71 | 545.54 | 494.23 | 2843.52 | 2668.05 |
| 5 | ಯಾದಗಿರಿ | 913.54 | 911.57 | 110.80 | 90.74 | 1507.03 | 1372.68 |
| 6 | ಕೊಪ್ಪಳ | 1329.07 | 1315.28 | 84.19 | 74.20 | 1863.69 | 1701.43 |
| 7 | ವಿಜಯನಗರ | 1606.70 | 1606.49 | 80.39 | 78.51 | 1990.17 | 1875.87 |
| | ಒಟ್ಟು | 11094.71 | 10946.24 | 1675.97 | 1421.17 | 14602.78 | 13530.32 |

## ಅನುಬಂಧ-3

### 2025-26ನೇ ಸಾಲಿಗೆ ಲೆಕ್ಕಶೀರ್ಷಿಕೆವಾರು ಬಿಡುಗಡೆಯಾದ ಅನುದಾನದ ವಿವರ

| ಕ್ರ. ಸಂ | ಜಿಲ್ಲೆ | ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯ 2225-00-102-0-38 | | | ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ 2225-00-102-0-35 | | | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ 2225-00-102-0-33 | | |
|---|---|---|---|---|---|---|---|---|---|---|
| | | ಅನುದಾನ | ಬಿಡುಗಡೆ | ವೆಚ್ಚ | ಅನುದಾನ | ಬಿಡುಗಡೆ | ವೆಚ್ಚ | ಅನುದಾನ | ಬಿಡುಗಡೆ | ವೆಚ್ಚ |
| 1 | ಕಲಬುರ್ಗಿ | 98.95 | 98.95 | 98.86 | 0.00 | 0.00 | 0.00 | 92.19 | 92.19 | 91.32 |
| 2 | ಬಳ್ಳಾರಿ | 535.05 | 535.05 | 529.72 | 121.46 | 121.46 | 121.46 | 255.84 | 255.84 | 241.99 |
| 3 | ಬೀದರ್ | 191.85 | 191.85 | 190.94 | 0.00 | 0.00 | 0.00 | 156.02 | 156.02 | 153.06 |
| 4 | ರಾಯಚೂರು | 386.68 | 386.68 | 383.68 | 119.48 | 119.48 | 119.48 | 682.56 | 682.56 | 650.86 |
| 5 | ಯಾದಗಿರಿ | 77.49 | 77.49 | 77.49 | 47.73 | 47.72 | 47.72 | 92.02 | 92.02 | 92.02 |
| 6 | ಕೊಪ್ಪಳ | 212.62 | 212.62 | 212.53 | 96.33 | 96.24 | 96.24 | 520.12 | 520.12 | 476.64 |
| 7 | ವಿಜಯನಗರ | 408.41 | 408.41 | 399.87 | 76.89 | 76.89 | 72.23 | 333.22 | 333.22 | 313.38 |
| ಒಟ್ಟು | | **1911.05** | **1911.05** | **1893.09** | **461.89** | **461.79** | **457.13** | **2131.97** | **2131.97** | **2019.27** |

ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

# ಅನುಬಂಧ-[illegible]

## 2026-27ನೇ ಸಾಲಿಗೆ ಲೆಕ್ಕಶೀರ್ಷಿಕೆವಾರು ಬಿಡುಗಡೆಯಾದ ಅನುದಾನದ ವಿವರ

ರೂ. ಲಕ್ಷಗಳಲ್ಲಿ.

| ಕ್ರ ಸಂ | ಜಿಲ್ಲೆ ಹೆಸರು | ಪರಿಶಿಷ್ಟ ಜಾತಿ/ಮೆಟ್ರಿಕ್ ನಂತರದ ಸರ್ಕಾರಿ ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-101-0-29 | | ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ನಿವಾಸಿ ಶಾಲೆಗಳ ನಿರ್ವಹಣೆ 2225-00-101-0-32 | | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-101-0-61 | |
|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| 1 | ಕಲಬುರ್ಗಿ | 2556.98 | 357.05 | 557.69 | 174.51 | 3260.66 | 1197.92 |
| 2 | ಬಳ್ಳಾರಿ | 1256.95 | 257.92 | 89.02 | 29.83 | 1411.62 | 405.00 |
| 3 | ಬೀದರ್ | 955.97 | 175.53 | 311.06 | 100.91 | 1974.77 | 628.12 |
| 4 | ರಾಯಚೂರು | 2621.99 | 349.51 | 531.46 | 170.68 | 3099.95 | 952.65 |
| 5 | ಯಾದಗಿರಿ | 902.53 | 176.67 | 116.84 | 42.41 | 1483.14 | 568.45 |
| 6 | ಕೊಪ್ಪಳ | 1332.15 | 173.79 | 92.72 | 34.83 | 2130.23 | 667.20 |
| 7 | ವಿಜಯನಗರ | 1544.74 | 136.26 | 78.14 | 26.06 | 2292.31 | 729.52 |
| | ಒಟ್ಟು | 11171.31 | 1626.73 | 1776.93 | 579.23 | 15652.68 | 5148.86 |

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ

## ಅನುಬಂಧ-4

### 2026-27ನೇ ಸಾಲಿಗೆ ಲೆಕ್ಕಶೀರ್ಷಿಕೆವಾರು ಬಿಡುಗಡೆಯಾದ ಅನುದಾನದ ವಿವರ

| ಕ್ರ. ಸಂ | ಜಿಲ್ಲೆ | ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯ 2225-00-102-0-38 | | | ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ 2225-00-102-0-35 | | | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ 2225-00-102-0-33 | | |
|---|---|---|---|---|---|---|---|---|---|---|
| | | ಅನುದಾನ | ಬಿಡುಗಡೆ | ವೆಚ್ಚ | ಅನುದಾನ | ಬಿಡುಗಡೆ | ವೆಚ್ಚ | ಅನುದಾನ | ಬಿಡುಗಡೆ | ವೆಚ್ಚ |
| 1 | ಕಲಬುರಗಿ | 264.31 | 136.21 | 75.18 | 0.00 | 0.00 | 0.00 | 145.29 | 76.73 | 25.50 |
| 2 | ಬಳ್ಳಾರಿ | 432.45 | 240.59 | 168.59 | 146.81 | 22.72 | 8.02 | 209.60 | 113.70 | 39.30 |
| 3 | ಬೀದರ್ | 361.43 | 189.96 | 54.69 | 0.00 | 0.00 | 0.00 | 191.54 | 102.91 | 16.68 |
| 4 | ರಾಯಚೂರು | 368.28 | 198.52 | 64.32 | 134.10 | 69.66 | 20.30 | 531.63 | 297.25 | 82.51 |
| 5 | ಯಾದಗಿರಿ | 217.40 | 112.94 | 73.02 | 116.84 | 59.98 | 38.59 | 150.60 | 79.08 | 49.85 |
| 6 | ಕೊಪ್ಪಳ | 252.41 | 84.14 | 78.04 | 137.82 | 45.94 | 41.10 | 391.39 | 130.46 | 110.59 |
| 7 | ವಿಜಯನಗರ | 349.52 | 109.10 | 10.17 | 128.58 | 69.20 | 0.58 | 224.19 | 131.96 | 15.13 |
| ಒಟ್ಟು | | **2245.80** | **1071.46** | **524.01** | **664.15** | **267.50** | **108.59** | **1844.24** | **932.09** | **339.56** |

ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

# ಅನುಬಂಧ-5

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 113 ಕ್ಕೆ

ವಿದ್ಯಾರ್ಥಿನಿಲಯಗಳಲ್ಲಿನ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಹಾಗೂ ಸಮರ್ಪಕವಾಗಿ ನಿಲಯ ನಿರ್ವಹಣೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-

**ಸಮಾಜ ಕಲ್ಯಾಣ ಇಲಾಖೆ**

- ಸಮಾಜ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ:SWD/EDU/ED7/ 20/2023/1065640 ದಿನಾಂಕ:07-10-2023ರಲ್ಲಿ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲೆಗಳಿಗೆ ಮಾಹೆಯಾನ ಸರಬರಾಜು ಆಗುತ್ತಿರುವ ಆಹಾರ ಪದಾರ್ಥಗಳ ಸಂಬಂಧ, ಪ್ರತಿ ಮಾಹೆ ಸರಬರಾಜು ಆಗುತ್ತಿರುವ ಆಹಾರ ಪದಾರ್ಥಗಳ ಮಾದರಿಯನ್ನು ಸಂರಕ್ಷಿಸುವ ಬಗ್ಗೆ ಕ್ರಮವಹಿಸಲಾಗಿದೆ ಹಾಗೂ ಪ್ರತಿ ಮಾಹೆ ಸರಬರಾಜಾಗುತ್ತಿರುವ ಆಹಾರ ಪದಾರ್ಥಗಳ ಮಾದರಿಗಳನ್ನು ಪಡೆದು ಸಂರಕ್ಷಿಸಿಡುವ ಬಗ್ಗೆ ಹೊರಡಿಸಲಾಗಿರುವ ಎಲ್ಲಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ, ಇಲಾಖಾ ವ್ಯಾಪ್ತಿಯ ನಿಲಯಗಳಿಗೆ ಉತ್ತಮ ಗುಣಮಟ್ಟದ ಆಹಾರ ಸಾಮಗ್ರಿಗಳು ಸರಬರಾಜು ಆಗುವಂತೆ ನೋಡಿಕೊಳ್ಳುವುದು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಸದರಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಜಿಲ್ಲೆಯ ಜಂಟಿ / ಉಪನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದ ಸಹಾಯಕ ನಿರ್ದೇಶಕರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದೆಂದು ಸೂಚಿಸಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2024, ದಿನಾಂಕ:30-10-2024ರಲ್ಲಿ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು 2024-25ನೇ ಸಾಲಿನಿಂದ ಜಿಲ್ಲಾಮಟ್ಟದಲ್ಲಿ ಪ್ರತಿ ಜಿಲ್ಲೆಯನ್ನು ಘಟಕವನ್ನಾಗಿಸಿ ಪ್ರತಿ 02 ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಟೆಂಡರ್ ಕರೆಯುವಂತೆ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿ ಆದೇಶಿಸಿದೆ.

- ಸರ್ಕಾರದ ಆದೇಶ ಸಂಖ್ಯೆ: ಸಕಇ 55 ಪಕವಿ 2023, ದಿನಾಂಕ:05-05-2023 ರಲ್ಲಿ ಪ್ರತಿ ನಿಲಯದಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿಯೇ Mess Committee ಅನ್ನು ರಚಿಸಿ, ಗುಣಮಟ್ಟ ಕಾಯ್ದುಕೊಳ್ಳಲಾಗಿರುತ್ತದೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿನ ಶೌಚಾಲಯ ಸ್ವಚ್ಛತೆ ಹಾಗೂ ನೈರ್ಮಲ್ಯದ ಕುರಿತಾಗಿ Sanitation committee ಯನ್ನು ರಚಿಸಲಾಗಿರುತ್ತದೆ.

- ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಕಛೇರಿ ಆದೇಶ ಸಂಖ್ಯೆ:ಸಕನಿ/ಇಡಿ-4/2022-23, ದಿನಾಂಕ:08-01-2024ರಲ್ಲಿ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಶುಚಿ ರುಚಿಯಾದ ಮತ್ತು ಪೌಷ್ಠಿಕ ಆಹಾರವನ್ನು ನೀಡುವ ಕುರಿತು ಹಾಗೂ ವಿದ್ಯಾರ್ಥಿನಿಲಯಗಳ ಸಮರ್ಪಕ ನಿರ್ವಹಣೆ ಮಾಡಲು ಜಿಲ್ಲಾಮಟ್ಟಗಳಲ್ಲಿ ವಾರ್ಡನ್, ಅಡುಗೆಯವರು ಮತ್ತು ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರು (ಹೊರಸಂಪನ್ಮೂಲ ನೌಕರರು ಸೇರಿದಂತೆ)ಗಳಿಗೆ ಸ್ವಚ್ಛತೆ ಹಾಗೂ ರುಚಿಯಾದ ಅಡುಗೆ ತಯಾರಿಸುವ ಕುರಿತಂತೆ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿರುತ್ತದೆ. ಈ ಸಂಬಂಧ ಪ್ರತಿ ಜಿಲ್ಲೆಗೆ ರೂ.50,000/-ಗಳಂತೆ ಒಟ್ಟು 31 ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

---2

- ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಸಕನಿ/ಇಡಿ-4/938298/2022-23ರಲ್ಲಿ ಇಲಾಖೆಯ ಸರ್ಕಾರಿ ವಸತಿ ಶಾಲೆ ಮತ್ತು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಶುಚಿತ್ವ ಹಾಗೂ ನೈರ್ಮಲ್ಯ ಮತ್ತು ರುಚಿಯಾದ ಊಟ-ತಿಂಡಿ ತಯಾರಿಸುವ ಕುರಿತು International institute of Hotel Management Bangalore ರವರಿಂದ ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ತರಬೇತಿ ನೀಡಲಾಗಿದ್ದು, ಉಳಿದ ಎಲ್ಲಾ ಜಿಲ್ಲೆಗಳಿಗೂ ಇದೇ ಮಾದರಿ ಪ್ರತಿಷ್ಠಿತ ಸಂಸ್ಥೆಗಳಿಂದ ತರಬೇತಿ ನೀಡಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ: ಸಕಇ 97 ಪಕವಿ 2023, ದಿನಾಂಕ: 28-07-2023ರಲ್ಲಿ ಟೆಂಡರ್ ಮೂಲಕ ಪಡೆಯಲಾಗುವ ಆಹಾರ ಸಾಮಾಗ್ರಿಗಳ ಗುಣಮಟ್ಟ ಕಾಯ್ದುಕೊಳ್ಳುವಂತೆಯೂ ಹಾಗೂ Freak Rate ನಮೂದಿಸುವ ಗುತ್ತಿಗೆದಾರರ ಬಿಡ್ ಅನ್ನು ನಿಯಮಾನುಸಾರ ತಿರಸ್ಕರಿಸುವಂತೆ ಸೂಚಿಸಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ SWD/EDU/ED4/80/2023 C-1161067 ದಿನಾಂಕ:15-09-2023 ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ ಉಪ ವಿಭಾಗಾಧಿಕಾರಿಗಳು ಪ್ರತಿ ಮಾಹೆಯಲ್ಲಿ ಕನಿಷ್ಠ ಒಂದು ಬಾರಿ ಹಾಗೂ ತಾಲ್ಲೂಕಿನ ತಹಶಿಲ್ದಾರ್‌ರು ಪ್ರತಿ ಮಾಹೆಯಲ್ಲಿ ಕನಿಷ್ಠ 2 ಬಾರಿ ಅನಿರೀಕ್ಷಿತ ಬೇಟಿ ನೀಡಿ ವರದಿ ಮಾಡುವಂತೆ ಆದೇಶಿಸಿದೆ.

- ಸರ್ಕಾರದ ಆದೇಶ ಸಂಖ್ಯೆ:ಸಕಇ 914 ಪಕವಿ 2024, ದಿನಾಂಕ:02-01-2025 ರಲ್ಲಿ ಇಲಾಖೆಯ ವಿದ್ಯಾರ್ಥಿನಿಲಯಗಳನ್ನು ಸಮರ್ಪಕ ಕಾರ್ಯ ನಿರ್ವಹಣೆಗೆ ಬೆಂಬಲ ಹಾಗೂ ಮಾರ್ಗದರ್ಶನವನ್ನು ನೀಡುವ ಸಲುವಾಗಿ ತಾಲ್ಲೂಕಿನ ಶಾಲೆಗಳ ಮುಖ್ಯೋಪಾದ್ಯಾಯರು, ಗ್ರಾಮಪಂಚಾಯತ್ PDO, ಪುರಸಭೆ/ನಗರ ಸಭೆ ಮುಖ್ಯಾಧಿಕಾರಿಗಳು, ಕ್ಲಸ್ಟರ್ ಸಂಪನ್ಮೂಲಾಧಿಕಾರಿ ಮತ್ತು ತಾಲ್ಲೂಕು/ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರ ಸದಸ್ಯರುಗಳು ಸೇರಿದಂತೆ ಪ್ರತಿ ವಿದ್ಯಾರ್ಥಿನಿಲಯದಲ್ಲಿ "ವಿದ್ಯಾರ್ಥಿನಿಲಯ ನಿರ್ವಹಣಾ ಸಮಿತಿ" ಯನ್ನು ರಚಿಸಿ ಆದೇಶಿಸಿದೆ.

- ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಸಕನಿ/ಇಡಿ-4/ಸಿಆರ್- 1691549/2024-25 ದಿನಾಂಕ: 28-10-2025ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಪೌಷ್ಠಿಕಾಂಶ ಪುಡಿಯನ್ನು (Nutrition Powder) ನೀಡಲಾಗುತ್ತಿದೆ.

- ಸರ್ಕಾರದ ಆದೇಶ ಸಂಖ್ಯೆ:ಸಕಇ 287 ಪಕವಿ 2024, ದಿನಾಂಕ:28-11-2024ರಲ್ಲಿ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಹೆಚ್ಚುಳವಾದ ರೂ.100/- ಗಳಲ್ಲಿ ವಾರದಲ್ಲಿ 04 ದಿನ ತಲಾ ಒಂದು ಮೊಟ್ಟೆಯಂತೆ ಪ್ರತಿ ನಿಲಯಾರ್ಥಿಗಳಿಗೆ ವಿತರಿಸಲು ಆದೇಶಿಸಿದೆ.

- 2026-27ನೇ ಸಾಲಿನಿಂದ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ವಸತಿ ಶಾಲೆಗಳ ಸಮಗ್ರ ನಿರ್ವಹಣೆಗಾಗಿ Centre for Smart Governance ರವರು ಸಿದ್ಧಪಡಿಸಿರುವ NILAYA ತಂತ್ರಾಂಶದ ಮೂಲಕ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಿರ್ವಹಣೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

- ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲಾಗುತ್ತಿದೆ.

- 2026-27ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 181 ರಲ್ಲಿನ ಭಾಷಣೆಯಂತೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳಾದ ಟೂ ಟಯರ್ ಕಾಟ್, ಕಾಯರ್ ಮ್ಯಾಟ್ರಸ್, ಸೋಲಾರ್ ವಾಟರ್ ಹೀಟರ್ ಮತ್ತು ಡೈನಿಂಗ್ ಟೇಬಲ್‌ಗಳನ್ನು ರೂ.25 ಕೋಟಿಗಳ ವೆಚ್ಚದಲ್ಲಿ ಪೂರೈಸಲು ಜಿಲ್ಲಾವಾರು ಕಾರ್ಯಕ್ರಮದಲ್ಲಿ ಒದಗಿಸಲಾಗಿದೆ.

- 2026-27ನೇ ಸಾಲಿಗೆ ಇಲಾಖೆಯ ವಿದ್ಯಾರ್ಥಿ ನಿಲಯಗಳ ಮೂಲಭೂತ ಸೌಕರ್ಯ ಕಲ್ಪಿಸಲು ರಾಜ್ಯ ವಲಯ ವಿವಿಧ ಅಭಿವೃದ್ಧಿ ಯೋಜನೆ ಬಂಡವಾಳ ಲೆಕ್ಕಶೀರ್ಷಿಕೆ: 4225-01-796-0-01ರಡಿ ರೂ.85.00ಕೋಟಿಗಳ ಅನುದಾನ ಹಾಗೂ ರಾಜಸ್ವ ಲೆಕ್ಕಶೀರ್ಷಿಕೆ: 2225-01-796-0-02 ರಡಿ ರೂ.80.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.

**ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ**

ಇಲಾಖೆ ವಿದ್ಯಾರ್ಥಿನಿಲಯಗಳಲ್ಲಿನ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಹಾಗೂ ಸಮರ್ಪಕವಾಗಿ ನಿಲಯ ನಿರ್ವಹಣೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-

- ಸರ್ಕಾರದ ಆದೇಶ ಸಂಖ್ಯೆ:ಸಕಇ 226 ಎಸ್‌ಟಿಪಿ 2023, ದಿನಾಂಕ:02.03.2024 ರಲ್ಲಿ ಇಲಾಖೆಯ ವಿದ್ಯಾರ್ಥಿನಿಲಯಗಳು ಹಾಗೂ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು 2023-24 ನೇ ಸಾಲಿನಿಂದ ಜಿಲ್ಲಾ ಮಟ್ಟದಲ್ಲಿಯೇ ಪ್ರತಿ ಎರಡು ವರ್ಷಗಳಿಗೊಮ್ಮೆ ಟೆಂಡರ್ ಕರೆಯುವಂತೆ ಹಾಗೂ ಮಾರುಕಟ್ಟೆ ದರದ ಶೇ 15 +/- ( + or - ) ನಿಗಧಿಪಡಿಸಿ, ಅದನ್ನು ಟೆಂಡರ್ ದರವೆಂದು ಪರಿಗಣಿಸಿ, ಅದನ್ನು ಮೀರಿದ ದರಗಳನ್ನು Freak Rate ಎಂದು ಪರಿಗಣಿಸಿ ನಿಯಮಾನುಸಾರ ತಿರಸ್ಕರಿಸುವಂತೆ ಮಾರ್ಗಸೂಚಿಯನ್ನು ಹೊರಡಿಸಿ ಆದೇಶಿಸಲಾಗಿರುತ್ತದೆ.
- ಸರ್ಕಾರದ ಆದೇಶ ಸಂಖ್ಯೆ: ಸಕಇ 55 ಪಕವಿ 2023, ದಿನಾಂಕ:05.05.2023 ರಲ್ಲಿ ಪ್ರತಿ ನಿಲಯದಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿಯೇ Mess Committee ಯನ್ನು ರಚಿಸಿ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿರುತ್ತದೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿನ ಶೌಚಾಲಯ ಸ್ವಚ್ಛತೆ ಹಾಗೂ ನೈರ್ಮಲ್ಯದ ಕುರಿತಾಗಿ Sanitation Committee ಯನ್ನು ರಚಿಸಲಾಗಿರುತ್ತದೆ.
- ಸರ್ಕಾರದ ಆದೇಶ ಸಂಖ್ಯೆ:SWD/65/STP/2021, ದಿನಾಂಕ:28.02.2023 ರಲ್ಲಿ ಆಹಾರ ಗುಣಮಟ್ಟದ ಪರಿಶೀಲನೆಗೆ ಸಂಬಂಧಿಸಿದಂತೆ ಸಹಾಯಕ ಆಯುಕ್ತರ (ಕಂದಾಯ ಇಲಾಖೆ) ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ:SWD/EDU/ED-4/80/2023, ದಿನಾಂಕ:15.09.2023 ರಲ್ಲಿ ವಿದ್ಯಾರ್ಥಿನಿಲಯಗಳ ಸಮರ್ಪಕ ನಿರ್ವಹಣೆಗಾಗಿ ತಹಶೀಲ್ದಾರರು ಆಯಾ ಉಪವಿಭಾಗದ ಉಪವಿಭಾಗಾಧಿಕಾರಿಗಳು ವಿದ್ಯಾರ್ಥಿನಿಲಯಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ಕೈಗೊಳ್ಳುವಂತೆ ಆದೇಶಿಸಲಾಗಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ.
- ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯಿಂದ ವಿದ್ಯಾರ್ಥಿನಿಲಯಗಳು/ವಸತಿ ಶಾಲೆಗಳಲ್ಲಿ ಆಹಾರ ಸುರಕ್ಷತೆ ಮತ್ತು ಸ್ವಚ್ಛತೆಯ ಕುರಿತು ಸಿಬ್ಬಂದಿಗಳಿಗೆ ತರಬೇತಿ ನೀಡುವಂತೆ ಹಾಗೂ ಸರಬರಾಜಾಗುವ ಆಹಾರ ಸಾಮಗ್ರಿಗಳ ಗುಣಮಟ್ಟದ ಪರೀಕ್ಷೆಯನ್ನು ಕಾಲ ಕಾಲಕ್ಕೆ ಕೈಗೊಳ್ಳಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
- ವಿದ್ಯಾರ್ಥಿಗಳು ಊಟ ಮಾಡುತ್ತಿರುವ ಛಾಯಾಚಿತ್ರಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳ Whatsapp Group ನಲ್ಲಿ ಅಪ್‌ಲೋಡ್ ಮಾಡಿರುವುದನ್ನು ಪರಿಶೀಲಿಸಿ ಆ ದಿನದ ಮೆನು ಚಾರ್ಟ್ ಪ್ರಕಾರ ಆಹಾರವನ್ನು ನೀಡಲಾಗಿದೆಯೇ ಎಂಬುದನ್ನು ಸಂಬಂಧಪಟ್ಟ ನೋಡಲ್ ಅಧಿಕಾರಿಗಳು ಖಾತ್ರಿ ಪಡಿಸಿಕೊಳ್ಳುತ್ತಿರುತ್ತಾರೆ.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ವಾರದಲ್ಲಿ ಕನಿಷ್ಠ ಎರಡು ದಿನ ಅನಿರೀಕ್ಷತವಾಗಿ ವಿದ್ಯಾರ್ಥಿನಿಲಯಗಳು ಹಾಗೂ ವಸತಿ ಶಾಲೆಗಳಿಗೆ ಭೇಟಿ ನೀಡಿ ಊಟದ ಗುಣಮಟ್ಟ ಹಾಗೂ ನಿಲಯದ ಸ್ವಚ್ಛತೆಯ ಬಗ್ಗೆ ಪರಿಶೀಲಿಸಿ ಅಗತ್ಯ ಸಲಹೆ ಸೂಚನೆ/ಮಾರ್ಗದರ್ಶನವನ್ನು ಸಿಬ್ಬಂದಿಗಳಿಗೆ ನೀಡುವಂತೆ ನಿರ್ದೇಶನ ನೀಡಲಾಗಿರುತ್ತದೆ.
- ಪ್ರತಿ ತಿಂಗಳು ಸರಬರಾಜಾಗುವ ಆಹಾರ ಪದಾರ್ಥಗಳು ಉತ್ತಮ ಗುಣಮಟ್ಟದಲ್ಲಿರುವ ಬಗ್ಗೆ ಹಾಗೂ ಬೇಡಿಕೆಯನುಸಾರ ಇರುವ ಕುರಿತು ಪರಿಶೀಲಿಸಿ ದಾಸ್ತಾನು ಪಡೆಯಲು ನಿಲಯ ಮೇಲ್ವಿಚಾರಕರುಗಳಿಗೆ ಸೂಚಿಸಲಾಗಿರುತ್ತದೆ.
- 2026-27ನೇ ಸಾಲಿನಿಂದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಮಗ್ರ ನಿರ್ವಹಣೆಗಾಗಿ Centre for Smart Governance ರವರು ಸಿದ್ಧಪಡಿಸಿರುವ NILAYA ತಂತ್ರಾಂಶದ ಮೂಲಕ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಿರ್ವಹಣೆ ಮಾಡಲು ಕ್ರಮಕ್ಕೈಗೊಳ್ಳಲಾಗುತ್ತಿದೆ.
- ಜಿಲ್ಲಾ ಮಟ್ಟದ ಅಧಿಕಾರಿಗಳ ಬೇಡಿಕೆಯನುಸಾರ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಡೈನಿಂಗ್ ಟೇಬಲ್, ಮ್ಯಾಟ್ರಸ್ ಮತ್ತು ಪಿಲ್ಲೋ, ಸ್ವೆಟರ್, ನೈಟ್‌ಡ್ರೆಸ್, ಟ್ರ್ಯಾಕ್ ಪ್ಯಾಂಟ್, ಟಿ-ಶರ್ಟ್, ಬಿಳಿ ಸಮವಸ್ತ್ರ, ಟವೆಲ್, ಸಮವಸ್ತ್ರ ಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಟೆಂಡರ್ ಆಹ್ವಾನಿಸಿ ಪೂರೈಸಲಾಗುತ್ತಿದೆ.

ಒಟ್ಟಾರೆಯಾಗಿ ಸಮಾಜ ಕಲ್ಯಾಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಬಗ್ಗೆ ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಎಲ್ಲಾ ರೀತಿಯ ಅಗತ್ಯ ಕ್ರಮಕೈಗೊಳ್ಳಲಾಗಿದೆ.